SUBJECT: 

NAME OF THE NEWS PAPER: ವಿಜಯವಾಣಿ DATE 11/11/2019

# ಜೂನ್‌ಗೆ ಮೇಲ್ಮನೆಯ 16 ಸದಸ್ಯರು ನಿವೃತ್ತಿ

ಶಿವಾನಂದ ತಗಡೂರು ಬೆಂಗಳೂರು

2020ರ ಜೂನ್‌ನಲ್ಲಿ 16 ವಿಧಾನಪರಿಷತ್ ಸದಸ್ಯರು ನಿವೃತ್ತಿಯಾಗಲಿದ್ದು, 75 ಸದಸ್ಯತ್ವವಿರುವ ಮೇಲ್ಮನೆಯ ಸಂಖ್ಯಾಬಲ 59ಕ್ಕೆ ಕುಸಿಯಲಿದೆ. ನಿವೃತ್ತಿ ಆಗುತ್ತಿರುವವರಲ್ಲಿ 11 ಕಾಂಗ್ರೆಸ್, 3 ಜೆಡಿಎಸ್, ಬಿಜೆಪಿ ಹಾಗೂ ಪಕ್ಷೇತರ ತಲಾ ಒಬ್ಬರು ಸದಸ್ಯರಿದ್ದಾರೆ.

ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಕಾಂಗ್ರೆಸ್‌ನ ಜಯಮ್ಮ, ಎಸ್.ಎಸ್. ಬೋಸರಾಜು, ಎಚ್.ಎಂ.ರೇವಣ್ಣ, ನಸೀರ್ ಅಹ್ಮದ್, ಎಂ.ಸಿ.ವೇಣುಗೋಪಾಲ್, ಶಿಕ್ಷಕರ ಕ್ಷೇತ್ರದ ಶರಣಪ್ಪ ಮಟ್ಟೂರ, ನಾಮನಿರ್ದೇಶಿತರಾದ ಕೆ.ಅಬ್ದುಲ್ ಜಬ್ಬಾರ್, ಡಾ. ಜಯಮಾಲ ರಾಮಚಂದ್ರ, ಐವನ್ ಡಿಸೋಜ, ಇಕ್ಬಾಲ್ ಅಹ್ಮದ್ ಸರಡಗಿ, ತಿಪ್ಪಣ್ಣ ಕಮಕನೂರ, ಜೆಡಿಎಸ್‌ನ ಟಿ.ಎ.ಶರವಣ, ಪದವೀಧರ ಕ್ಷೇತ್ರದ ಆರ್. ಚೌಡರೆಡ್ಡಿ ತೂಪಲ್ಲಿ, ಶಿಕ್ಷಕರ ಕ್ಷೇತ್ರದ ಪುಟ್ಟಣ್ಣ, ಬಿಜೆಪಿಯಲ್ಲಿ ಪದವೀಧರ ಕ್ಷೇತ್ರದ ಎಸ್.ವಿ.ಸಂಕನೂರ, ಪಕ್ಷೇತರ ಸದಸ್ಯರಾದ ಡಿ.ಯು. ಮಲ್ಲಿಕಾರ್ಜುನ ನಿವೃತ್ತಿಯಾಗಲಿದ್ದಾರೆ.



- ಅನರ್ಹರ ವಲಯದಿಂದ ಪೈಪೋಟಿ
- 59ಕ್ಕೆ ಕುಸಿಯಲಿರುವ ಸಂಖ್ಯಾಬಲ

**ನಾಮನಿರ್ದೇಶನ ಮೇಲೆ ಕಣ್ಣು:** ಐವರು ನಾಮನಿರ್ದೇಶಿತರು ನಿವೃತ್ತಿಯಾಗುತ್ತಿರುವ ಕಾರಣ ಆ ಸ್ಥಾನಗಳ ಮೇಲೆ ಕೆಲ ಅನರ್ಹ ಶಾಸಕರು ಕಣ್ಣಿಟ್ಟಿರುವುದು ಬಿಜೆಪಿಯೊಳಗೆ ಸ್ಪರ್ಧೆಯನ್ನು ತೀವ್ರಗೊಳಿಸಿದೆ. ಸರ್ಕಾರ ರಚನೆ ಸಂದರ್ಭ ಕೆಲ ಶಾಸಕರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿ ಸಚಿವರನ್ನಾಗಿಸುವ ಭರವಸೆ ನೀಡಲಾಗಿದೆ. ಆದರೆ, ಇದೆಲ್ಲವೂ ಸುಪ್ರೀಂಕೋರ್ಟ್ ತೀರ್ಪು ಅವಲಂಬಿಸಿದೆ. ಮೊದಲಿಂದಲೂ ಪಕ್ಷದೊಳಗೆ ಕೆಲಸ ಮಾಡಿಕೊಂಡು ಬಂದಿರುವ ಮುಖಂಡರು, ಮಾಜಿ ಶಾಸಕರು ನಾಮನಿರ್ದೇಶನದ ಮೇಲೆಯೇ ಕಣ್ಣಿಟ್ಟಿದ್ದಾರೆ.

**ಸಂಖ್ಯಾಬಲ ಕುಸಿತ:** ಜೂನ್‌ನಲ್ಲಿ ನಿವೃತ್ತಿಯಾಗುವ ಸದಸ್ಯರನ್ನು ಹೊರತುಪಡಿಸಿದರೆ, ಮೇಲ್ಮನೆಯಲ್ಲಿ 38 ಇರುವ ಕಾಂಗ್ರೆಸ್ ಸದಸ್ಯರ ಸಂಖ್ಯಾಬಲ 27ಕ್ಕೆ ಕುಗ್ಗಲಿದೆ. ಜೆಡಿಎಸ್ 17ರಿಂದ 14ಕ್ಕೆ ಇಳಿಯಲಿದ್ದರೆ, ಬಿಜೆಪಿ ಬಲ 18ರಿಂದ 17ಕ್ಕೆ, ಪಕ್ಷೇತರರ ಬಲ 2ರಿಂದ 1 ಆಗಲಿದೆ. ಉಪಚುನಾವಣೆ ಫಲಿತಾಂಶ ಪಕ್ಷಗಳ ಮುಂದಿನ ಸಂಖ್ಯಾಬಲ ನಿರ್ಧರಿಸಲಿದೆ.

## ಎಲ್ಲೆಲ್ಲಿ ಎಷ್ಟೆಷ್ಟು?

**ವಿಧಾನಸಭೆ ಕ್ಷೇತ್ರದಿಂದ ಆಯ್ಕೆಯಾಗಿರುವ 25 ಸದಸ್ಯರ ಪೈಕಿ ಏಳು ಮಂದಿ ನಿವೃತ್ತಿ ನಂತರ 18ಕ್ಕೆ, ಪದವೀಧರ ಕ್ಷೇತ್ರದ 7 ಸದಸ್ಯರಲ್ಲಿ ಇಬ್ಬರು ನಿವೃತ್ತಿಯಾಗುತ್ತಿದ್ದು 5ಕ್ಕೆ, ಶಿಕ್ಷಕರ ಕ್ಷೇತ್ರ 7ರಲ್ಲಿ ಇಬ್ಬರು ನಿವೃತ್ತರಾದರೆ 5ಕ್ಕೆ ಸಂಖ್ಯಾಬಲ ಇಳಿಯಲಿದೆ. ಇನ್ನು 11 ನಾಮನಿರ್ದೇಶಿತರಲ್ಲಿ ಐವರು ನಿವೃತ್ತಿ ಆಗಿ 6ಕ್ಕೆ ಇಳಿಯಲಿದೆ. ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾಗಿರುವ 25 ಸದಸ್ಯರಲ್ಲಿ ಸದ್ಯಕ್ಕೆ ಯಾರೂ ನಿವೃತ್ತಿ ಆಗುವುದಿಲ್ಲ.**